ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# ರ್ನಾಟಕ ಪಬ್ಲಿಕ್ ಶಾಲೆ ತೆರ್ನಮಕ್ಕಿ

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

## ಭಟ್ಕಳ ತಾಲೂಕು ಉತ್ತರ ಕನ್ನಡ ಜಿಲ್ಲೆ –581421

ಮಳೆಬಿಲ್ಲು...

ಕಲಿಕಾ ಚೇತರಿಕೆ ವರ್ಷ

# ಪ್ರಥಮ ಭಾಷೆ ಕನ್ನಡ

SAMAGRA SHIKSHA SCHEME

9ನೇ ತರಗತಿ

# ಕಲಿಕಾ ಚೇತರಿಕೆ ಕಾರ್ಯಕ್ರಮ

ಕಲಿಕಾ ಫಲ-1 ರಿಂದ 13

ಸಂಕಲನಾತ್ಮಕ ಮೌಲ್ಯಮಾಪನ–2

2022–23

# ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ, ಭಟ್ಕಳ

## ಸಂಕಲನಾತ್ಮಕ ಮೌಲ್ಯಮಾಪನ-02 ಮಾರ್ಚ್ 2023 (ಎಲ್-1)

### 9ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಕಲಿಕಾ ಚೇತರಿಕೆ ಮೌಲ್ಯಾಂಕನ

**ಅಂಕಗಳು : 100** **ಸಮಯ : 3 ಗಂಟೆ 15 ನಿಮಿಷಗಳು**

**ಈ ಕೆಳಗಿನ ಪ್ರಶ್ನೆಗಳಿಗೆ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6*1=6**

**1. ಈ ಕೆಳಗಿನ ಪದಗಳಲ್ಲಿ ಸರಿಯಾದ ರೂಪ.**

ಎ) ಭರ್ತಿ ಬಿ) ಭತ್ರಿ ಸಿ) ಚರ‍್ತಿ ಡಿ) ಚರ್ತಿ

**2. ಬಾಲ / ಪದ್ಧತಿಯನ್ನು / ನಿಷೇಧಿಸಲಾಗಿದೆ / ಕಾರ್ಮಿಕ– ಈ ವಾಕ್ಯದ ಸರಿಯಾದ ರೂಪ.**

ಎ) ಕಾರ್ಮಿಕ ಬಾಲ ಪದ್ಧತಿಯನ್ನು ನಿಷೇಧಿಸಲಾಗಿದೆ. ಬಿ) ಬಾಲ ಕಾರ್ಮಿಕ ಪದ್ಧತಿಯನ್ನು ನಿಷೇಧಿಸಲಾಗಿದೆ.
ಸಿ) ಪದ್ಧತಿಯನ್ನು ಬಾಲ ಕಾರ್ಮಿಕ ನಿಷೇಧಿಸಲಾಗಿದೆ. ಡಿ) ಬಾಲ ಪದ್ಧತಿಯನ್ನು ಕಾರ್ಮಿಕ ನಿಷೇಧಿಸಲಾಗಿದೆ.

**3. ಕೆಳಗಿನ ವಾಕ್ಯಗಳಲ್ಲಿ ಭೂತ ಕಾಲವನ್ನು ಸೂಚಿಸುವ ವಾಕ್ಯವಿದು;**

ಎ) ಮಕ್ಕಳು ಪಾಠವನ್ನು ಓದಿದರು. ಬಿ) ಮಕ್ಕಳು ಪಾಠವನ್ನು ಓದಿವರು.
ಸಿ) ಮಕ್ಕಳು ಪಾಠವನ್ನು ಓದುತ್ತಾರೆ. ಡಿ) ಈ ಮೇಲಿನ ಯಾವುದೂ ಅಲ್ಲ

**4. 'ಅಂಗಡಿಯಿಂದ ತರೋದು ಮುಂದಿಟ್ಟುಕೊಂಡು ಅಳುವುದು'–ಈ ಒಗಟಿನ ಸರಿಯಾದ ಉತ್ತರವಿದು;**

ಎ) ಬದನೆಕಾಯಿ ಬಿ)ಮೆಣಸಿನಕಾಯಿ ಸಿ)ಹಾಗಲಕಾಯಿ ಡಿ) ಈರುಳ್ಳಿ

**5. ದಡಾರ ಮತ್ತು ರುಬೆಲ್ಲಾ ಲಸಿಕೆ ಎಷ್ಟು ವರ್ಷದೊಳಗಿನ ಮಕ್ಕಳಿಗೆ ಹಾಕಲಾಗುತ್ತದೆ?**

ಎ) 7 ರಿಂದ 28 ವಯಸ್ಸಿನ ಮಕ್ಕಳಿಗೆ. ಬಿ) 14 ರಿಂದ 21 ವಯಸ್ಸಿನ ಮಕ್ಕಳಿಗೆ.
ಸಿ) ಜನನ 5 ದಿಂದ 9 ವರ್ಷದ ಮಕ್ಕಳಿಗೆ. ಡಿ) 9 ತಿಂಗಳಿಂದ 15 ವರ್ಷದೊಳಗಿನ ಮಕ್ಕಳಿಗೆ.

6. 

**ಈ ಚಿತ್ರಕ್ಕೆ ಸೂಕ್ತವಾದ ಉತ್ತರ ಆಯ್ದು ಬರೆಯಿರಿ.**

ಎ) ನೀರನ್ನು ಹರಿಯಲು ಬಿಡು.
ಬಿ) ಸ್ನೇಹಿತರೊಂದಿಗೆ ಮಾತನಾಡಿ.
ಸಿ) ನೀರಿನೊಂದಿಗೆ ಆಟವಾಡಿ.
ಡಿ) ನೀರನ್ನು ಮಿತವಾಗಿ ಬಳಸಿ.

**ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿಹೊಂದುವ ಪದ ಬರೆಯಿರಿ. 4*1=4**

7. ಕಾಡು ಬೆಳೆಸಿ : ನಾಡು ಉಳಿಸಿ : : ಹೆಣ್ಣೊಂದು ಕಲಿತರೆ : ______________
8. ದಿವಿನಾಗು : ಮೈತುಂಬಿಕೊಳ್ಳು : : ತೋಷ :
9. ಕಲಕಲ : ಅನುಕರಣಾವ್ಯಯ : : ಹಚ್ಚಹಸಿರು : ________
10. ಮನುಷ್ಯ, ಬೆಟ್ಟ : ರೂಢನಾಮ : : ವಿದ್ಯಾರ್ಥಿ, ಶಿಕ್ಷಕ :________

**ಒಂದು ವಾಕ್ಯದಲ್ಲಿ ಉತ್ತರಿಸಿರಿ. 7*1=7**

11. 'ಬಾಳಸಂಜೆ' ಪದ್ಯದ ಪ್ರಕಾರ ಹಣ್ಣುಹಣ್ಣು ಮುದುಕ-ಮುದುಕಿ ಎಲ್ಲಿ ವಾಸವಾಗಿದ್ದರು?
12. ಕೋವಿಡ್-19 ರೋಗದ ಯಾವುದಾದರೂ ಎರಡು ಲಕ್ಷಣಗಳನ್ನು ಬರೆಯಿರಿ.
13. ಯಾರ ಜನ್ಮದಿನವನ್ನು ಮಕ್ಕಳ ದಿನಾಚರಣೆ ಎಂದು ಆಚರಿಸಲಾಗುತ್ತದೆ?
14. ಗಾಂಧೀಜಿಯವರ ಆತ್ಮಕಥನದ ಹೆಸರೇನು?
15. ಪ್ರಾಮಾಣಿಕತೆ ಕತೆಯಲ್ಲಿ ಬರುವ ಸಂತನ ಹೆಸರೇನು?

16. ‘ಮಳೆ’ ಪದ್ಯದಲ್ಲಿ ಮಾನವನ ಯಾವ ದೋಷಗಳು ಕೊಚ್ಚಿಹೋಗಬೇಕೆಂದು ಕವಿ ಆಶಿಸುತ್ತಾರೆ?

17. ನಿಮ್ಮ ವೈಯಕ್ತಿಕ ಇ–ಮೇಲ್ ವಿಳಾಸವನ್ನು ಬರೆಯಿರಿ.

**ಈ ಕೆಳಗಿನ ಪ್ರಶ್ನೆಗಳನ್ನು ಓದಿಕೊಂಡು ಅವುಗಳಿಗೆ ಸೂಕ್ತ ಉತ್ತರವನ್ನು ಬರೆಯಿರಿ. 10*2=20**

18. ನಿಮ್ಮ ಊರಿನ ಜನರಿಗೆ ಪರಿಸರ ಮತ್ತು ಸಾಮಾಜಿಕ ಜಾಗೃತಿ ಮೂಡಿಸಲು ಊರಿನಲ್ಲಿ ಜಾಥ ಕೈಗೊಳ್ಳಲಾಗಿದ್ದು, ಕೆಳಗಿನ ಪದಗಳನ್ನು ಬಳಸಿ ಘೋಷ ವಾಕ್ಯಗಳನ್ನು ರಚಿಸಿ ಘೋಷಣಾ ಫಲಕ ತಯಾರಿಸಿ.

**ಪದಗಳು :– (ಮರ, ಕಾಡು, ನಾಡು, ಪ್ಲಾಸ್ಟಿಕ್, ವಾಯು ಮಾಲಿನ್ಯ, ಹೊಗೆ, ಜಲ, ಧೂಮಪಾನ, ಶಾಲೆ, ಅಬಲೆ–ಸಬಲೆ, ಬಾಲ್ಯ ವಿವಾಹ, ಮಾದಕ ವಸ್ತು, ಆರೋಗ್ಯ, ಮಲಮೂತ್ರ, ಸಾಂಕ್ರಾಮಿಕ ರೋಗ, ಮಣ್ಣು, ಪರಿಸರ, ಬಲವಂತದ ದುಡಿಮೆ, ಮಾನವ ಕಳ್ಳ ಸಾಗಾಣಿಕೆ, ಭಿಕ್ಷೆ, ಅಪರಾಧ**)?

19. 

ಈ ಚಿತ್ರವನ್ನು ಗಮನಿಸಿ ಅಲ್ಲಿ ಏನು ನಡೆಯುತ್ತಿರಬಹುದು ಎಂಬುದನ್ನು ಕಲ್ಪಿಸಿಕೊಂಡು, ಸಂಭಾಷಣೆಯನ್ನು ಬರೆಯಿರಿ.

**20. ಕೆಳಗಿನ ಕಥೆಯನ್ನು ಓದಿ ಅರ್ಥೈಸಿಕೊಂಡು ಅಡಿಗೆರೆ ಎಳೆದ ಪದಗಳನ್ನು ಅಕಾರಾದಿಯಾಗಿ ಜೋಡಿಸಿ.**

**ಕಥೆ – ರೈತ ಮತ್ತು ಹದ್ದು**

ಒಂದೂರಿನಲ್ಲಿ ಒಬ್ಬ ರೈತನಿದ್ದ. **ದಿನಾಲು** ತನ್ನ ಹೊಲದಲ್ಲಿ ಕೆಲಸ ಮಾಡುತ್ತಿದ್ದ. ಒಮ್ಮೆ ಒಂದು ಹದ್ದು ಬಲೆಯೊಳಗೆ ಸಿಕ್ಕಿಕೊಂಡಿತ್ತು. ಅದನ್ನು **ರೈತ** ನೋಡಿದ. **ಹದ್ದಿನ** ಪರಿಸ್ಥಿತಿ **ನೋಡಿ** ರೈತನಿಗೆ ಕರುಣೆ ಬಂದಿತು. ಹದ್ದನ್ನು ಬಲೆಯಿಂದ **ಬಿಡಿಸಿದ**. ಅದು ಸಂತಸದಿಂದ ಹಾರಿ ಹೋಯಿತು. ಊರ ಹೊರಗೆ ರೈತನ ಮನೆಯೊಂದಿತ್ತು. **ಒಮ್ಮೆ** ಆತ ಮನೆಯಲ್ಲಿ ಕುಳಿತಿದ್ದ. ಅವನ ಮನೆ ಗೋಡೆ ಕುಸಿಯುವ ಸ್ಥಿತಿಯಲ್ಲಿತ್ತು. **ಆಕಾಶ**ದಲ್ಲಿ ಹಾರಾಡುತ್ತಿದ್ದ ಹದ್ದು **ಅದನ್ನು** ಗಮನಿಸಿತು. ಹದ್ದು ಒಂದು ನಾಣ್ಯವನ್ನು ಹುಡುಕಿ ತಂದಿತು. ರೈತನಿಗೆ ಕಾಣುವಂತೆ ಸ್ವಲ್ಪ ದೂರದಲ್ಲಿ ಬೀಳಿಸಿತು. ಅದೇನೆಂದು ನೋಡಲು ರೈತ ಎದ್ದು ಹೊರಗೆ ಬಂದನು, ಆಗ ಗೋಡೆ **ಕುಸಿಯಿತು.** ಅವನಿಗೆ ಹದ್ದು ಬೇಕೆಂದೆ **ನಾಣ್ಯ** ಹಾಕಿದ್ದು ಎಂದು ತಿಳಿಯಿತು. ನನ್ನ ಜೀವ ಉಳಿಸಿದ ಹದ್ದಿನ ಕಡೆಗೆ ಪ್ರೀತಿಯಿಂದ ನೋಡಿದನು. ಅದಕ್ಕೆ **ಕೈಮುಗಿದನು**. ಹದ್ದು ಹರ್ಷದಿಂದ ಮುಗಿಲ ಕಡೆಗೆ ಹಾರಿ ಹೋಯಿತು.

21. ನೀರಿನ ಸಂರಕ್ಷಣೆ ಮಾಡುವಂತೆ ಜನರಲ್ಲಿ ಜಾಗೃತಿ ಮೂಡಿಸಲು ಬೇಕಾದ ನಾಲ್ಕು ಘೋಷಣಾ ವಾಕ್ಯಗಳನ್ನು ಬರೆಯಿರಿ.

22. ಬ್ರಿಟಿಷರ ಸರಕುಗಳನ್ನು ಭಾರತೀಯರು ಕೊಳ್ಳುವುದನ್ನು ನಿಲ್ಲಿಸಿದ್ದರಿಂದ, ಬ್ರಿಟಿಷರ ಮೇಲೆ ಆದ ಪರಿಣಾಮಗಳನ್ನು ಪಟ್ಟಿಮಾಡಿ.

23. ನೀವು ಭಾಗವಹಿಸಿದ ಯಾವುದಾದರೊಂದು ಜಾತ್ರೆಯ ಅನುಭವವನ್ನು ಕುರಿತು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

24. ನಿಮ್ಮ ಬಾಲ್ಯದಲ್ಲಿ ನಡೆದ ವಿಶೇಷ ಘಟನೆ ಒಂದನ್ನು ಕುರಿತು ಸ್ವಾರಸ್ಯವಾಗಿ ಬರೆಯಿರಿ.

25. “ರೈತ ದೇಶದ ಬೆನ್ನೆಲುಬು” ಎಂಬ ಹೇಳಿಕೆಯನ್ನು ನೀವು ಒಪ್ಪುವಿರಾ? ಒಪ್ಪುವುದಾದರೆ ಕಾರಣಗಳನ್ನು ಬರೆಯಿರಿ.


26. ಕಪ್ಪೆಗಳ ಸಂತತಿಯ ಮೇಲೆ ಪರಿಣಾಮ ಬೀರುವ ಮನುಷ್ಯನ ವರ್ತನೆಗಳು ಯಾವುವು?

27. ಕೆಳಗೆ ಕೊಟ್ಟಿರುವ ಸುಳುಹುಗಳ ಆಧಾರದ ಮೇಲೆ ಬಯಲು ಸೀಮೆಯ ವರ್ಣನೆಯನ್ನು ಬರೆಯಿರಿ.

**ಸುಳುಹುಗಳು: • ಹಚ್ಚ ಹಸುರಾದ ಹೊಲಗದ್ದೆಗಳು • ತೂಗಿ ತೊನೆಯುವ ತೋಟ**

**• ತುಂಬಿ ಹರಿಯುವ ನದಿ • ಹಾರಾಡುವ ಹಕ್ಕಿಗಳು • ದುಡಿಯುವ ರೈತರು.**

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. 11*3=33**

28. 

ಕೆಳಗಿನ ಚಿತ್ರವನ್ನು ಗಮನಿಸಿ ತಂಬಾಕಿನ ದುಷ್ಪರಿಣಾಮಗಳನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

29 'ಗೆಳೆತನದಲ್ಲಿ ನಂಬಿಕೆ ದ್ರೋಹ ಮಾಡುವುದು ತಪ್ಪು' ಎಂಬ ಹೇಳಿಕೆಯನ್ನು ಸಮರ್ಥಿಸಿಕೊಂಡು ಬರೆಯಿರಿ.

30. ನೀವು ಓದಿದ ಒಂದು ಪುಸ್ತಕದ ಹೆಸರು, ಲೇಖಕರ ಹೆಸರು ಮತ್ತು ಆ ಪುಸ್ತಕದಲ್ಲಿ ನಿಮಗೆ ಇಷ್ಟವಾದ ಅಂಶಗಳು ಯಾವುವು? ಕಾರಣಗಳನ್ನು ಪಟ್ಟಿಮಾಡಿ.

31. ಸೈಬರ್ ವಂಚಕರ ವಂಚನೆಯಿಂದ ತಪ್ಪಿಸಿಕೊಳ್ಳಲು ಯಾವೆಲ್ಲಾ ಮಾರ್ಗಗಳನ್ನು ಅನುಸರಿಸಬಹುದು? ತಿಳಿಸಿ.

32. **ಈ ಕೆಳಗಿನ ಗಾದೆ ಮಾತುಗಳಲ್ಲಿ ಒಂದನ್ನು ಕುರಿತು ವಿಸ್ತರಿಸಿ ಬರೆಯಿರಿ**

- ಉಪ್ಪು ತಿಂದವನು, ನೀರು ಕುಡಿಯಲೇಬೇಕು.
- ಕೋಟಿ ವಿದ್ಯೆಗಿಂತ, ಮೇಟಿ ವಿದ್ಯೆ ಮೇಲು.

33. ನಿಮ್ಮ ಒಂದು ದಿನದ ಸಂಪೂರ್ಣ ದಿನಚರಿಯನ್ನು ಬರೆಯಿರಿ.

34. ನಿಮ್ಮ ಊರಿನಲ್ಲಿ ಅಥವಾ ನಿಮ್ಮ ಮನೆಯಲ್ಲಿ ಬಿದಿರನ್ನು ಯಾವ ಯಾವ ಕೆಲಸಗಳಿಗೆ ಬಳಸುತ್ತಾರೆ? ಎಂಬುದನ್ನು ಕುರಿತು ಟಿಪ್ಪಣಿಯನ್ನು ಬರೆಯಿರಿ.

35. ನಿಮ್ಮ ಊರಿನ ಗಣೇಶೋತ್ಸವವು ಸುಗಮವಾಗಿ ನೆರವೇರಲು ಗ್ರಾಮ ಪಂಚಾಯ್ತಿಯವರು ಪ್ರಕಟಣೆಯೊಂದನ್ನು ಹೊರಡಿಸಬೇಕೆಂದುಕೊಂಡಿದ್ದಾರೆ, ಅವರಿಗೊಂದು ಪ್ರಕಟಣಾ ಪತ್ರವೊಂದನ್ನು ಸಿದ್ಧಪಡಿಸಿ.

36. **ಕೊಟ್ಟಿರುವ ಸಿದ್ಧಲಿಂಗಯ್ಯನವರ ಆತ್ಮಕಥನದ ಭಾಗವನ್ನು ಜೀವನ ಚರಿತ್ರೆಯಾಗಿ ಪರಿವರ್ತಿಸಿ ಬರೆಯಿರಿ.**

**ಊರು ಕೇರಿ – 1 : ಡಾ. ಸಿದ್ಧಲಿಂಗಯ್ಯ**

**ಅಭಿನಯ ಕಲೆಯಲ್ಲಿ ಮೊದಲ ಪಾಠ**

ಒಂದು ದಿನ ಮಧ್ಯಾಹ್ನದ ತರಗತಿಯಲ್ಲಿ ಮಾಸ್ತರಿಗೆ ಬೇಜಾರಾಗಿ ವಿದ್ಯಾರ್ಥಿಗಳನ್ನು ಹಾಡು ಹೇಳುವಂತೆ ಕೇಳಿದರು. ಯಾರೋ ಒಬ್ಬ 'ಸಾರ್ ಇವನು ಇನ್ಸ್‌ಪೆಕ್ಟರ್ ತುಟಿ ತೋರಿಸುತ್ತಾನೆ' ಎಂದು ಬಿಟ್ಟ. ಮಾಸ್ತರರಿಗೆ ಕುತೂಹಲವಾಗಿ 'ಅದೇನು ಮಾಡಿ ತೋರಿಸೋ' ಎಂದರು. ನಾನು ಹಾಗೆಯೇ ಮಾಡಿದೆ. ಮಾಸ್ತರು, ಹುಡುಗರು ಕೊಟ್ಟ ಪ್ರೋತ್ಸಾಹದಿಂದ ಉತ್ತೇಜಿತನಾಗಿ ಇನ್ಸ್‌ಪೆಕ್ಟರ್ ಮುಖಭಾವ, ನಡಿಗೆ, ಮಾತುಗಳನ್ನೆಲ್ಲ ಅನುಕರಿಸಿದೆ. ಮಾಸ್ತರರಿಗೆ ನಗು ತಡೆಯಲಾರದೆ ಕಣ್ಣೀರು ಬರುವಂತಾಯಿತು. ಅಂದಿನಿಂದ ಕೊನೆ ಪಿರಿಯಡ್ಡಿನಲ್ಲಿ ಮಾಸ್ತರು ನನ್ನನ್ನು ನಿಲ್ಲಿಸಿ ಏನಾದರೂ ಮಾಡಯ್ಯ ಎನ್ನುತ್ತಿದ್ದರು. ನನಗೆ ಇನ್ಸ್‌ಪೆಕ್ಟರ್ ಹಾವಭಾವ ಬಿಟ್ಟು ಇನ್ನೇನು ಗೊತ್ತಿರಲಿಲ್ಲ. ಮಾಸ್ತರರನ್ನು ಅನುಕರಿಸಿದರೆ ಏಟಿನ ಭಯ. ಆದ್ದರಿಂದ ಕಣ್ಣು ಮೆಡ್ಡರಿಸುವುದು, ಹುಚ್ಚನಂತೆ ಮುಖ ತಿರುಗಿಸುವುದು, ಹಲ್ಲು ಗಿಂಜುವುದು ಇತ್ಯಾದಿಗಳನ್ನು ಮಾಡಿ ರಂಜಿಸುತ್ತಿದ್ದೆ. ಕೆಲದಿನಗಳಲ್ಲೇ ತರಗತಿಯಲ್ಲಿ ಬಹು ಮುಖ್ಯನಾದ ವಿದ್ಯಾರ್ಥಿಯಾದೆ.

37. ಶಶಾಂಕನು ತನ್ನ ಹಸಿವನ್ನು ನೀಗಿಸಿಕೊಳ್ಳಲು ಕಂಡುಕೊಂಡ ದಾರಿ ಸರಿಯೇ? ಹಾಗಾದರೆ ಅವನು ಏನು ಮಾಡಬಹುದಿತ್ತು? ಪಟ್ಟಿ ಮಾಡಿ.

38. ಕೊಟ್ಟಿರುವ ಪದ್ಯವನ್ನು ನಿಮ್ಮದೇ ರೀತಿಯಲ್ಲಿ ಮುಂದುವರೆಸಿ.

**ಪದ್ಯ–1**

ಹಂಸ ಒಂದು ಬಳುಕಿ ನಿಂತು
ಹೇಳಿತೇನನು?
ನನ್ನ ನಡಿಗೆ ನನಗೆ ಚಂದ
ಹೆಮ್ಮೆ ಪಡುವೆನು.
ನವಿಲೊಂದು ಕುಣಿಯುತ ಬಂದು
ಹೇಳಿತೇನನು?
ನನ್ನ ನಾಟ್ಯ ನನಗೆ ಅಂದ
ನಾನು ಕುಣಿವೆನು.
ಇರುವೆಯೊಂದು ಬಳಿಗೆ ಬಂದು
ಹೇಳಿತೇನನು?
ನನ್ನ ಶಿಸ್ತು ನಿನಗೆ ಇಷ್ಟ
ಎಂದು ನುಡಿವೆನು

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.** **5*4=20**

**39. ಕೆಳಗಿನ ಜನಪದ ಗೀತೆಯನ್ನು ಅರ್ಥಮಾಡಿಕೊಂಡು ಅಲ್ಲಿನ ಪಾತ್ರಗಳಿಗೆ ಅನುಸಾರವಾಗಿ ಸಂಭಾಷಣೆಯನ್ನು ಬರೆಯಿರಿ.**

ಭಾಗ್ಯದ ಬಳೆಗಾರ ಹೋಗಿ ಬಾ ನನ್ನವರಿಗೆ ॥
ನಿನ್ನ ತವರೂರ ನಾನೇನು ಬಲ್ಲೆನು
ಗೊತ್ತಿಲ್ಲ ಎನಗೆ ಗುರಿಯಿಲ್ಲ ಎಲೆ ಬಾಲೆ
ತೋರಿಸು ಬಾರೇ ತವರೂರ ॥1॥
ಬಾಳೆ ಬಲಕ್ಕೆ ಬಿಡೊ ಸೀಬೆ ಎಡಕ್ಕೆ ಬಿಡೊ
ನಟ್ಟನಡುವೇಲಿ ನೀ ಹೋಗೋ ಬಳೆಗಾರ
ಅಲ್ಲಿಹುದೇ ನನ್ನ ತವರೂರು।
ಮುತ್ತೈದೆ ಎಲೆ ಹೆಣ್ಣೆ ತೋರುಬಾರೆ ತವರೂರ ॥2॥
ಆಲೆ ಆಡುತಾವೆ ಗಾಣ ತಿರುಗುತಾವೆ
ನವಿಲು ಸಾರಂಗ ನಲಿತಾವೆ ಬಳೆಗಾರ
ಅದೇ ಕಾಣೋ ನನ್ನ ತವರೂರು।
ಮುತ್ತೈದೆ ಎಲೆ ಹೆಣ್ಣೆ ತೋರುಬಾರೆ ತವರೂರ ॥3॥
ಹಂಚಿನ ಮನೆ ಕಾಣೋ ಕಂಚಿನ ಕದ ಕಾಣೊ
ಮಿಂಚಾಡೊವೆರಡು ಗಿಣಿ ಕಾಣೊ ಬಳೆಗಾರ
ಅಲ್ಲಿಹುದೇ ನನ್ನ ತವರೂರು।
ಮುತ್ತೈದೆ ಎಲೆ ಹೆಣ್ಣೆ ತೋರುಬಾರೆ ತವರೂರ ॥4॥
ಮುತ್ತೈದೆ ಹಟ್ಟೀಲಿ ಮುತ್ತೀನ ಚಪ್ಪರ ಹಾಕಿ
ನಟ್ಟ ನಡುವೇಲಿ ಪಗಡೆಯ ಆಡುತಾಳೆ
ಅವಳೆ ಕಾಣೊ ಎನ್ನ ಹಡೆದವ್ವಾ।
ಮುತ್ತೈದೆ ಎಲೆ ಹೆಣ್ಣೆ ತೋರುಬಾರೆ ತವರೂರ ॥5॥
ಅಚ್ಚ ಕೆಂಪಿನ ಬಳೆ ಹಸಿರು ಗೀರಿನ ಬಳೆ
ಎನ್ನ ಹಡೆದವ್ವೆ ಬಲು ಆಸೆ ಬಳೆಗಾರ
ಕೊಂಡ್ಹೋಗೊ ಎನ್ನ ತವರೀಗೆ।
ಭಾಗ್ಯದ ಬಳೆಗಾರ ಹೋಗಿ ಬಾ ನನ್ನವರೀಗೆ ॥6॥

**40. ಈ ಕೆಳಗಿನ ವಚನವನ್ನು ಓದಿ, ಅರ್ಥೈಸಿಕೊಂಡು, ಮೌಲ್ಯಾಧಾರಿತ ಸಾರಾಂಶ ಬರೆಯಿರಿ.**

ಕೃತಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ
ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯಾ
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ
ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯಾ
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ
ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯಾ
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ
ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯಾ
ಗುಹೇಶ್ವರ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು.

– ಅಲ್ಲಮಪ್ರಭು

41. **ಕೆಳಗಿನ ಪ್ರಶ್ನೆಗಳಲ್ಲಿ ಬೇಕಾದ ಒಂದಕ್ಕೆ 8–10 ವಾಕ್ಯಗಳಲ್ಲಿ ಉತ್ತರಿಸಿರಿ.**

ನಿಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ಊರಿನ ಪ್ರಗತಿಪರ ರೈತರೊಬ್ಬರನ್ನು ಸನ್ಮಾನಿಸಲು ಅವರ ವ್ಯಕ್ತಿ ಸಾಧನೆ ಪರಿಚಯವನ್ನು ಬರೆಯಬೇಕಾಗಿದೆ. ಆ ಕಾರಣ ನೀವು ನಿಮ್ಮ ಊರಿನ ರೈತರೊಬ್ಬರನ್ನು ಸಂದರ್ಶಿಸಿ ಅವರ ಪರಿಚಯವನ್ನು ಬರೆಯಿರಿ

**ಅಥವಾ**


ನಿಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ನಮ್ಮ ದೇಶದ ಸೈನ್ಯದಲ್ಲಿ ಸೇವೆಸಲ್ಲಿಸುತ್ತಿರುವ ಯೋದನನ್ನು ಸನ್ಮಾನಿಸಲು ಅವರ ವ್ಯಕ್ತಿ ಸಾಧನೆ ಪರಿಚಯವನ್ನು ಬರೆಯಬೇಕಾಗಿದೆ. ಆ ಕಾರಣ ನೀವು ನಿಮ್ಮ ಊರಿನ ಯೋಧನೊಬ್ಬನನ್ನು ಸಂದರ್ಶಿಸಿ ಅವರ ಪರಿಚಯವನ್ನು ಬರೆಯಿರಿ.

42. 'ಪಾರಿವಾಳ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಯೋಧ ಮತ್ತು ಹೆಂಗಸು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ (ಕ.ಫ–5)

**43. ಕೆಳಗಿನ ಚಿತ್ರ ಸರಣಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ, ಕಥೆಯೊಂದನ್ನು ರಚಿಸಿ, ಕಥೆಗೆ ಒಂದು ಶೀರ್ಷಿಕೆ ನೀಡಿ.**



**44. ಕೆಳಗೆ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.**

ನೀವು ನೋಡಿದ ಜಾತ್ರೆಯ ಸೊಬಗನ್ನು ಕುರಿತು ದೊಡ್ಡಪ್ಪನ ಮಗಳು ಅಥವಾ ಮಗನಿಗೆ ಒಂದು ವೈಯಕ್ತಿಕ ಪತ್ರವನ್ನು ಬರೆಯಿರಿ..

**ಅಥವಾ**

ನಿಮ್ಮನ್ನು ರವಿ ಎಂದು ಭಾವಿಸಿಕೊಂಡು, ನಿಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅಂಕಪಟ್ಟಿ ಮತ್ತು ವರ್ಗಾವಣೆ ಪ್ರಮಾಣಪತ್ರ ನೀಡುವಂತೆ ಕೋರಿ ಮುಖ್ಯಾಧ್ಯಾಪಕರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**45. ಈ ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಒಂದು ಪ್ರಬಂಧವನ್ನು ಬರೆಯಿರಿ.**

- ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು
- ಸ್ವಚ್ಛಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ